ಹೇಗೋ ಒಪ್ಪಿಸಿದರೆ ಆಯ್ತು, ನೀನು ರೆಡಿ ಆಗು" ಅಂತ ಎಬ್ಬಿಸಿದ್ದಳು.

ಮದುವೆಯಾಗಿ ಹಾಯಾಗಿ ಅತ್ತೆಯ ಮನೆಯಲ್ಲಿದ್ದೆ. ಆಷಾಢಕ್ಕೆ ವಾರವಿರುವಂತೆಯೇ ನರೋತ್ತಮನೇ ನನ್ನನ್ನು ಅಮ್ಮನ ಮನೆಗೆ ಬಿಟ್ಟು ಹೋಗಿದ್ದ. ಅವನತ್ತ ಹೋಗುತ್ತಲೇ, "ಏನು ಅದೃಷ್ಟಾನೇ ನಿಂದು, ನಾಳೆ ಸೋಮವಾರ ಕೆಲಸಕ್ಕೆ ಸೇರಿಕೊಳ್ಳೋಕೆ ಆದೇಶ ಬಂದಿದೆ" ಎಂದು ಅಮ್ಮ ಸಂಭ್ರಮಿಸಿದ್ದಳು. "ಇಲ್ಲಮ್ಮ, ಅವರಿಗೆ ಇಷ್ಟವಿಲ್ಲ. ನಾ ಹೋಗೋಲ್ಲ" ಎಂದರೂ ''ಹೇಗೂ ಒಂದು ತಿಂಗಳು ಇಲ್ಲೇ ಇರ್ತಿಯಲ್ಲಾ ಸುಮ್ಮನೆ ಹೋಗು'' ನನಗೆ ಹಿಂಸೆಯಾಗುವಷ್ಟು ಗೋಗರೆದಳು– "ಅಳಿಯಂದಿರನ್ನು ಹೇಗಾದರೂ ಒಪ್ಪಿಸಿದರಾಯ್ತು."

''ತಿಂಗಳಾದ ಮೇಲೆ?" ನನ್ನ ಸಂಶಯ.

"ಏನೋ ಒಂದು ಮಾಡೋಣ.''

ನನ್ನನ್ನು ಸರಿಸುಮಾರು ದಬ್ಬಿದ್ದಳು.

ಅನಿರೀಕ್ಷಿತವಾಗಿ ನರೋತ್ತಮ್ ನನ್ನನ್ನು ನೋಡಲು ಮನೆಗೆ ಬಂದು, ನಾನು ಮನೆಯಲ್ಲಿಲ್ಲದಿದ್ದಾಗ, ಅಪ್ಪ ನಿಜ ಬಾಯ್ಬಿಟ್ಟಿದ್ದರು. ಕೂಡಲೇ ಅಮ್ಮ ವಹಿಸಿಕೊಂಡಿದ್ದರು ''ಯಾವುದೊ ತಾತ್ಕಾಲಿಕ ಹುದ್ದೆ ತಿಂಗಳು ಸುಮ್ಮನೆ ಇರೋ ಬದಲು ಹೋಗ್ತಿದ್ದಾಳೆ" ಎಂದು. ಅವನಿಗೆ ಸಮಾಧಾನವಾಗದೆ ನಾನು ಕೆಲಸ ಮಾಡುವ ಕಚೇರಿಯಲ್ಲಿ ವಿಚಾರಿಸಿ ವಸ್ತುಸ್ಥಿತಿ ತಿಳಿದು, ಹಿಂದೆಯೇ ಜೋಯಿಸರ ಮೂಲಕ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ನನ್ನನ್ನು ಮಾತನಾಡಲು ಬಿಡದೆ ಅಮ್ಮನೇ ಎಲ್ಲ ಮಾತನಾಡಿ ಮುಗಿಸಿದ್ದಳು.

★★★

ಆಷಾಢ ಮುಗಿಯುತ್ತಲೇ ಕರೆದೊಯ್ಯಲು ಖುದ್ದು ನರೋತ್ತಮ ಬಂದಿದ್ದನಲ್ಲ?

ಅಂದು ಕೆಲಸಕ್ಕೆ ಹೋಗಿದ್ದೆ. ಕಚೇರಿ ಮುಗಿಯುತ್ತಲೇ ಭೇಟಿಯಾಗಿ, "ಈಗಿಂದೀಗಲೇ ಊರಿಗೆ ಹೊರಡೋಣ ನಡಿ'' ಎಂದಿದ್ದ. ನಾನು ಸುಮ್ಮನೆ ಹೊರಟುಬಿಡಬೇಕಾಗಿತ್ತು. ಮನೆಗೆ ಹೋಗಿ ಅಮ್ಮನಿಗೆ ಒಂದುಮಾತು ಹೇಳಿ ಹೋಗುವುದೆಂದು ತಡೆದೆ. ಅವರು ಬಸ್ ನಿಲ್ದಾಣದಲ್ಲಿ ಕಾದಿದ್ದರೆ, ಮನೆಗೆ ಕಾಲಿಟ್ಟ ನನ್ನನ್ನು ಹೊರಗಡಿಯಿಡಲು ಬಿಟ್ಟಿರಲಿಲ್ಲ. "ಮನೆಗೆ ಅಳಿಯಂದಿರು ಬರಲಿ, ನಾನು ತಿಳಿಸಿ ಇಲ್ಲೇ ಮನೆ ಮಾಡೋಕೆ ಹೇಳ್ತೀನಿ'' ಎಂದು ಮಾತಿನಲ್ಲೇ ಕಟ್ಟುಹಾಕಿದ್ದಳು.

"ಅಮ್ಮ ನಾನೇ ಹೋಗ್ತೀನಿ, ಯಾಕೋ ಪರಿಸ್ಥಿತಿ ವಿಕೋಪಕ್ಕೆ ಹೋಗ್ತಿದೆ" ಎಂದೆ.

"ನೀನು ಯಾವ ತಪ್ಪನ್ನೂ ಮಾಡಿಲ್ಲ, ನಿನ್ನ ಕೆಲಸ ನೋಡು ಹೋಗು" ಎಂದಾಗ ಮತ್ತೆ ಮೌನಕ್ಕೆ ಶರಣು. ಅಕ್ಕ ಎರಡನೇ ಹೆರಿಗೆಗೆ ಬಂದಿದ್ದಳು. ಅಣ್ಣ, ಎಲ್ಲರ ವಿರೋಧವನ್ನೂ ಲೆಕ್ಕಿಸದೆ ತಾನು ಮೆಚ್ಚಿದ ಹುಡುಗಿಯ ಜೊತೆ ಮದುವೆಯಾಗಿ ಮುಂಬೈಗೆ ಹೊರಟುಬಿಟ್ಟಿದ್ದ.
ಮನೆಯಲ್ಲಿ ಉಸಿರುಗಟ್ಟುವ ವಾತಾವರಣ.

★★★

ವಾರದ ನಂತರ, ನರೋತ್ತಮನ ಪರ ವಕೀಲರಿಂದ ನನಗೆ ನೋಟಿಸ್ ಬಂದಿತ್ತು.

"ಇದಕ್ಕೆಲ್ಲ ಹೆದರಿದರೆ ಆಗೋಲ್ಲ, ನೀನು ಸುಮ್ಮನಿರು'' ಎಂದು ಅಮ್ಮ ಬಾಯಿ ಮುಚ್ಚಿಸಿದ್ದಳು. ಹೊಟ್ಟೆಯಲ್ಲಿ ಬೀಜಾಂಕುರವಾಗಿತ್ತು. "ಒಳ್ಳೆಯದೇ ಆಯ್ತು, ಈ ವಿಷಯ ತಿಳಿಯಲಿ, ಓಡಿ ಬರ್ತಾರೆ'' ಅಮ್ಮನ ಡಿಫೆನ್ಸ್.

ಜೋಯಿಸರು ಕೊನೆಯ ಸಂದೇಶ ತಂದರು.

''ಈಗಲೂ ಮೀರಿಲ್ಲ. ಅತ್ತೆ ಮನೆಗೆ ಹೊರಟುಬಿಡು ಇಳಾ, ನಿನ್ನ ಅಮ್ಮನ ಮಾತನ್ನು ಕೇಳಿ